**5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ (ಪೀಠಾಸೀನ, ಸಾಗರ)**

**ಎಂ.ವಿ.ಸಿ. ಸಂಃ 637/2024 PW1**

**ದಿನಾಂಕಃ 07-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಜೆ ಎಸ್ ಎಸ್ ವಕೀಲರಿಂದಃ**

ನನಗೆ ಅಪಘಾತವಾದಾಗ ನನಗೆ 60 ವರ್ಷ ವಯಸ್ಸಾಗಿತ್ತು ಎಂದರೆ ಸರಿ. ನನಗೆ ತಿಂಗಳಿಗೆ 30 ಸಾವಿರ ರೂ. ಆದಾಯ ಇದೆ ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲೆ ಇಲ್ಲ. ನನಗೆ ತಿಂಗಳಿಗೆ 30 ಸಾವಿರ ರೂ. ಆದಾಯ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಅರ್ಜಿಯನ್ನು 6 ತಿಂಗಳ ಒಳಗಡೆ ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಅಳಿಯ ನಡೆಸುವ ಕರಾವಳಿ ಹೋಟೇಲ್ ಶಿವಮೊಗ್ಗದಿಂದ ಸಾಗರ ರಸ್ತೆಯಲ್ಲಿ ಎಡಗಡೆ ಬರುತ್ತದೆ ಎಂದರೆ ಸರಿ. ನಾನು ಈಗ ಸದರಿ ಹೋಟೆಲ್ ನಲ್ಲಿ ಕೆಲಸ ಮಾಡುತ್ತಿಲ್ಲ. ನಾನು ಅಪಘಾತವಾದ ಸಮಯದಲ್ಲಿ ನನ್ನ ಹೋಟೆಲ್ ನಿಂದ ಶಿವಮೊಗ್ಗದ ಕಡೆಗೆ ಹೋಗುವ ರಸ್ತೆಯಲ್ಲಿ ಹೋಗುತ್ತಿದ್ದೆ. ಅಪಘಾತ ಆದಾಗ ನಾನು ನಮ್ಮ ಹೋಟೆಲ್ ಮುಂದೆ ಇರುವ ರಸ್ತೆಯನ್ನು ದಾಟಿ ರಸ್ತೆಯ ಇನ್ನೊಂದು ಬದಿಗೆ ಹೋಗಿದ್ದೆ. ನಾನು ರಸ್ತೆಯನ್ನು ದಾಟುವಾಗ ಯಾವುದೇ ವಾಹನ ಬರುತ್ತಿರಲಿಲ್ಲ. ಸಾಕ್ಷಿ ಮುಂದುವರೆದು ವಾಹನ ನನಗೆ ಹಿಂಬದಿಯಿಂದ ಬಂದು ಗುದ್ದಿರುತ್ತದೆ ಎಂದು ಹೇಳುತ್ತಾರೆ. ಟೆಂಪೋ ಟ್ರಾವೆಲರ್ ಹೇಗೆ ಬರುತ್ತಿತ್ತು ಎಂದು ನೀವು ಗಮನಿಸಿದಿರಾ ಎಂದರೆ ಸಾಕ್ಷಿ ಇಲ್ಲಾ ಎಂದು ಹೇಳುತ್ತಾರೆ. ನಾನು ಟೆಂಪೋ ಟ್ರಾವೆಲರ್ ಬರುವುದನ್ನು ನೋಡದೇ ರಸ್ತೆ ದಾಟಿದ್ದರಿಂದ ಈ ಅಪಘಾತ ಸಂಭವಿಸಿರುತ್ತದೆ ಎಂದರೆ ಸರಿಯಲ್ಲ. ಅಪಘಾತ ನನ್ನ ತಪ್ಪಿನಿಂದ ಆಗಿರುತ್ತದೆ ಎಂದರೆ

ಸರಿಯಲ್ಲ.

ಅಪಘಾತದಿಂದ ನನ್ನ ಭುಜಕ್ಕೆ , ತಲೆಗೆ ಮತ್ತು ಕಾಲುಗಳಿಗೆ ಪೆಟ್ಟಾಗಿರುತ್ತದೆ. ದಿನಾಂಕಃ19-01-2024 ರಂದು ನಾನು ಮಂಗಳೂರಿನ ಎನಪೋಯಾ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ ಎಂದರೆ ಸರಿ. ನಾನು ಸದರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡ ಮೇಲೆ ದಿನಾಂಕಃ29-02-2024 ರಂದು ಡಿಸ್ಚಾರ್ಜ್ ಆಗಿರುತ್ತೇನೆ ಎಂದರೆ ಸರಿ. ಪುನಃ ನಾನು ದಿನಾಂಕಃ 25-03-2024 ಕ್ಕೆ ಸದರಿ ಆಸ್ಪತ್ರೆಗೆ ದಾಖಲಾಗಿದ್ದು ಆ ಸಮಯದಲ್ಲಿ ನನ್ನ ಬಲಗಾಲಿಗೆ ವೈದ್ಯರು ರಾಡ್ ನ್ನು ಹಾಕಿರುತ್ತಾರೆ. ನಂತರ ನಾನು ದಿಃ10-04-2024 ರಂದು ಡಿಸ್ಚಾರ್ಜ್ ಆಗಿರುತ್ತೇನೆ . ಈಗ ನಾನು ಆರಾಮಾಗಿರುತ್ತೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ ಮೆಡಿಕಲ್ ಬಿಲ್ ಗಳನ್ನು ಹೊರತುಪಡಿಸಿ ನನ್ನ ಬಳಿ ಬೇರೆ ಮೆಡಿಕಲ್ ಬಿಲ್ಸ್ ಇರುವುದಿಲ್ಲ ಎಂದರೆ ಸರಿ. ನನಗೆ ಮುಂದಿನ ಚಿಕಿತ್ಸೆಗಾಗಿ ಒಂದು ಲಕ್ಷ ರೂ. ಬೇಕು ಅಂತ ನನ್ನ ಮುಖ್ಯ ವಿಚಾರಣೆಯಲ್ಲಿ ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ವಿಶೇಷ ಆಹಾರಕ್ಕೆ ನಾನು 50 ಸಾವಿರ ರೂ. ಖರ್ಚು ಮಾಡಿರುತ್ತೇನೆ ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲೆ ಇಲ್ಲ. ಆಸ್ಪತ್ರೆಯಲ್ಲಿ ನನ್ನ ಜೊತೆ ನನ್ನ ಮಗಳು ಇದ್ದರು. ನನ್ನನ್ನು ನೋಡಿಕೊಳ್ಳಲು ಆಸ್ಪತ್ರೆಯಲ್ಲಿ ಇಬ್ಬರು ಇದ್ದರು ಎಂದು ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ನಾನು ಮಂಗಳೂರಿನಿಂದ ನಮ್ಮ ಊರಿಗೆ ಕಾರ್ ನಲ್ಲಿ ಬಂದಿರುತ್ತೇನೆ. ನಿಪಿ 12 ಆ್ಯಂಬುಲೆನ್ಸ್ ಬಿಲ್ ಗಳನ್ನು ಈ ಕೇಸಿನ ಸಲುವಾಗಿ ಸೃಷ್ಟಿ ಮಾಡಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಮಗೆ ಓಡಾಡಲು 60 ಸಾವಿರ ರೂ ಖರ್ಚಾಗಿದೆ ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತದಿಂದ ನನಗೆ 5 ಲಕ್ಷ ರೂ. ನಷ್ಟ ಆಗಿದೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಅಪಘಾತದಿಂದ ನನಗೆ ಅಂಗನ್ಯೂನ್ಯತೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ 5 ಲಕ್ಷ ರೂ.

ಪರಿಹಾರ ಹಣ ಕೊಡಬೇಕು ಎಂದು ಕೇಳಿರುವುದು ಸರಿಯಲ್ಲ. ಅಂಗನ್ಯೂನ್ಯತೆ ಬಗ್ಗೆ ಯಾವುದೇ ದಾಖ್ಲೆಯನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿ. ಅಪಘಾತ ನನ್ನ ತಪ್ಪಿನಿಂದ ಆಗಿರುವುದರಿಂದ 2 ನೇ ಎದುರುದಾರರು ಪರಿಹಾರ ಹಣವನ್ನು ನೀಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ ಹೇ ಕೇ ಸ ಇದೆ

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ (ಪೀಠಾಸೀನ, ಸಾಗರ).